


ಎಡದಿಂದ ಬಲಕ್ಕೆ:

1. ಆದರ್ಶಗಳನ್ನು ಪಾಲಿಸುವಲ್ಲಿ ಆಕೆಗೆ ಹೊಲುವ ಮತ್ತೊಬ್ಬರಿಲ್ಲ 4
3. ಸ್ವಾಮಿಗಳ ಪಕ್ಕದಲ್ಲೇ ಎನಿಸುವಷ್ಟು ಹತ್ತಿರ 3
4. ಅವರನ್ನೆಲ್ಲ ಸಾಕ್ಷರರನ್ನಾಗಿಸು, ಕಾಪಾಡು 3
6. ಆ ವ್ಯಾಪಾರಿಯ ಬಂಧು ಬಳಗದ ಗುಂಪು 4
7. ಗರ್ವ ಮುರಿಯಲು ತಕ್ಕಂತಿದೆ, ಈ ಮಡಿಕೆ ಮುರಿಯದ ಬಟ್ಟೆ 4
9. ಕೂರ್ಮಾವತಾರ ತಾಳಿದ್ದು ಇದೇ 'ಲಕ್ಷ್ಮೀ ಪತಿ' ವಿಷ್ಣು 4
12. ಅಕ್ಕನ ಮನೆಯಲ್ಲಿ ಲಭ್ಯ ಇದೆ, ಸರ್ವ ವಿಧ ಸೌಕರ್ಯ 4
14. ಹೊಲದ ಕೆಲಸ ಕುರಿತು ಮಾತಿನ ಜಗಳ 3
15. ಜೋರಾಗಿ ಕದ ತಟ್ಟಿದ್ದಕ್ಕೆ 'ಬಿಸಿಯಾದ ಕ್ರೀಡೆ'ಯಂಥ ಹೊಡೆದಾಟ 3
16. ಅಧಿಕಾರವೋ ಧಿಕ್ಕಾರವೋ ಯಾವುದನ್ನೂ ಲಕ್ಷಿಸುವುದಿಲ್ಲ ಸೂರ್ಯ 4

ಮೇಲಿಂದ ಕೆಳಕ್ಕೆ:

1. ಪ್ರಹಾರ ಮಾಡಿ ಅವರ ವಸ್ತುಗಳ ಕಳುವು 4
2. ಬಾಣದಷ್ಟು ಬೇಗ ಅದೆಷ್ಟು ವೇಗ? 4
3. ವೇಷಧಾರಿಯ ಬೆನ್ನೇರಿ ಇದೆಂಥ ಪಯಣ! 3
5. ಸುಮ್ಮನಿದ್ದರೆ ಸಾಕು, ಆಕೆಯ ಕೋಪವೆಲ್ಲ ಬುಡಮೇಲು 3
6. ಪೊರಕೆಯೂ ಕೂಡ ಒಂದು ಕಾರ್ಯ ಸಾಧನವೇ ತಾನೇ? 4
8. ಪೂರ್ಣವಾಗಿ ಬಲ್ಲವರಿಲ್ಲ ಆ ಶತ್ರುವಿನ ಸೇನಾ ಶಕ್ತಿ 4
10. ಮೂರ್ಖರ ಸಹವಾಸ ತುಂಬ ಅಪಾಯಕರ 3
11. ತಹಬಂದಿಯಲ್ಲಿಡುವ ಏರ್ಪಾಡಿಗೆ ತಾಳ್ಮೆಯಿಂದಲೇ ಬುನಾದಿ 4
12. ಅಪ್ಪನ ಕೈಂಕರ್ಯ ಕಿಂಚಿತ್ತೂ ಮಾಡದ್ದು ಎಂಥ ದ್ರೋಹ! 4
13. ಕಟ್ಟಿಗೆ ಮಾರುವ ಸ್ಥಳದಲ್ಲಿ ಏಕೆ ಇಷ್ಟೊಂದು ಕಿರುಚಾಟ? 3

## 02–07–2020 ಉತ್ತರಗಳು

ಎಡದಿಂದ ಬಲಕ್ಕೆ:

1.ಉತ್ತೇಜಕ 3. ಕರುಣೆ 4. ಡಬರಿ 6. ಸುಲಭಿಸು 7. ಆಯವ್ಯಯ 9. ಮುಜುಗರ 11. ದವಲತ್ತು 13. ಸುರಲೋಕ 15. ಅನುಚಿತ 17. ತೆಗಳು 18. ಗಾಯನ 19. ಕುರಿಮಂದೆ

ಮೇಲಿಂದ ಕೆಳಕ್ಕೆ:

1.ಉಣಿಸು 2. ಕಡಸು 3. ಕರ್ತವ್ಯ 5. ರಿವಾಜು 7. ಆನಂದ 8. ಯಕೃತ್ತು 9. ಮುಗಿಸು 10. ರಜಕ 12. ಲಲಿತೆ 14. ರಸನ 15. ಅಳುಕು 16. ತಗಾದೆ

ಪ್ರಶ್ನಾಂಕಣ

# ದಕ್ಷಿಣ ಅಮೆರಿಕ: ಏನೇನು ಅದ್ಭುತ?

ದಕ್ಷಿಣ ಅಮೆರಿಕ ಅದೊಂದು ಪರಮ ವಿಶಿಷ್ಟ ಭೂಖಂಡ (ಚಿತ್ರ1). ಧರೆಯ ಸಪ್ತ ಭೂಖಂಡಗಳಲ್ಲೂ ವೈಶಾಲ್ಯದಲ್ಲಿ ನಾಲ್ಕನೆಯ ಸ್ಥಾನದಲ್ಲಿರುವ ಈ ಖಂಡದಲ್ಲಿ ಭೂ ಲಕ್ಷಣಗಳ ಸರ್ವ ವಿಧ ಸೃಷ್ಟಿಗಳೂ ಅದ್ಭುತದ ಪರಾಕಾಷ್ಠೆ ಮುಟ್ಟಿವೆ; ವಿಶ್ವ ದಾಖಲೆಗಳನ್ನೇ ಸೃಜಿಸಿವೆ.

ಇಡೀ ಧರೆಯಲ್ಲಿ ಗರಿಷ್ಠ ಉದ್ದದ (6992 ಕಿ.ಮೀ), ಗರಿಷ್ಠ ಜಲಪ್ರವಾಹದ (ಧರೆಯ ಸಕಲ ನದಿಗಳ ಒಟ್ಟು ನೀರಿನ ಶೇ. 20 ಭಾಗ), ಗರಿಷ್ಠ ಉಪನದಿಗಳ (1100 ಉಪನದಿಗಳು), ಗರಿಷ್ಠ ಅಗಲದ ಪ್ರವಹನ ಪಾತ್ರದ (100 ಕಿ.ಮೀ), ಗರಿಷ್ಠ ಜಲಾನಯನ ಪ್ರದೇಶದ (ಏಳು ದಶಲಕ್ಷ ಚದರ ಕಿ.ಮೀ.) ವಿಶ್ವ ಪ್ರಸಿದ್ಧ 'ಅಮೆಜಾನ್ ನದಿ' (ಚಿತ್ರ 2; ಭೂಪಟದಲ್ಲಿ ಬಾಣ 1) ಇಲ್ಲಿನ ಪ್ರಥಮ ಅದ್ಭುತ.

ಅಮೆಜಾನ್ ನದಿಯ ಕೃಪಾಪೋಷಿತ ವೃಷ್ಟಿವನ 'ಅಮೆಜೋನಿಯಾ' (ಚಿತ್ರ 2; ಭೂಪಟದಲ್ಲಿ ಬಾಣ 1) ಈ ಭೂಖಂಡದ ಮತ್ತೊಂದು ಅತ್ಯದ್ಭುತ. ಧರೆಯ ಸಕಲ ವೃಷ್ಟಿವನಗಳ ಒಟ್ಟು ವಿಸ್ತಾರದ ಅರ್ಧದಷ್ಟು ಎಂದರೆ ಸಮೀಪ 55 ದಶಲಕ್ಷ ಚದರ ಕಿ.ಮೀ ವೈಶಾಲ್ಯಕ್ಕೆ ದಟ್ಟೈಸಿರುವ ಈ ಮಳೆ ಕಾಡು ಪೃಥ್ವಿಯ ಅತ್ಯಂತ ನಿಬಿಡ, ಅತ್ಯಂತ ವೈವಿಧ್ಯಮಯ ಜೀವಾವಾರ ಆಗಿದೆ ಕೂಡ!

ಈ ಭೂಖಂಡದ ಪಶ್ಚಿಮದಲ್ಲಿ, ಉತ್ತರದಿಂದ ದಕ್ಷಿಣಕ್ಕೆ ಹಬ್ಬಿರುವ ಗಗನಚುಂಬಿ ಪರ್ವತ ಪಂಕ್ತಿ 'ಆಂಡಿಸ್' (ಭೂಪಟದಲ್ಲಿ ಬಾಣ 2) ಏಳು ಸಾವಿರ ಕಿ.ಮೀ ಉದ್ದಕ್ಕೆ ಹಬ್ಬಿದೆ. ಇದರದು 'ಇಳೆಯ ಅತ್ಯಂತ ದೀರ್ಘ ಪರ್ವತ ಸ್ತೋಮ' ಎಂಬ ವಿಶ್ವದಾಖಲೆ.




ಆಂಡಿಸ್‌ನ ಹಿಂಬದಿಯಲ್ಲಿ ಪೆಸಿಫಿಕ್ ಮಹಾಸಾಗರಕ್ಕೆ ಹೊಂದಿದಂತೆ ಹರಡಿರುವ 'ಅಟಕಾಮಾ ಮರುಭೂಮಿ' (ಚಿತ್ರ 3; ಭೂಪಟದಲ್ಲಿ ಬಾಣ 3) ದಕ್ಷಿಣ ಅಮೆರಿಕದ ಮತ್ತೊಂದು ಮಹದದ್ಭುತ. 1,000 ಕಿ.ಮೀ ಉದ್ದದ, ಒಂದು ಲಕ್ಷ ಚದರ ಕಿ.ಮೀ ವಿಸ್ತಾರದ ಅಟಕಾಮಾ ಪೃಥ್ವಿಯ ಅತ್ಯಂತ ಶುಷ್ಕ ಮರುಭೂಮಿ ಎಂಬ ವಿಶ್ವ ದಾಖಲೆಯನ್ನು ಹೊಂದಿದೆ.

ಇದೇ ಭೂಖಂಡದ ವೆನಿಜುವೆಲಾ ದೇಶದಲ್ಲಿ 'ಚೂರುನ್ ನದಿ' ಸೃಜಿಸಿರುವ 'ಏಂಜಲ್ ಜಲಪಾತ' ಇದೆ (ಭೂಪಟದಲ್ಲಿ ಬಾಣ 4). 3212 ಅಡಿ ಎತ್ತರದಿಂದ ಧುಮುಕುತ್ತಿರುವ ಏಂಜಲ್ ಧರೆಯ ಅತ್ಯಂತ ಉನ್ನತ ಜಲಪಾತ ಎಂಬ ದಾಖಲೆ ಹೊಂದಿದೆ.

ದಕ್ಷಿಣ ಅಮೆರಿಕದಲ್ಲೇ ಬ್ರೆಜಿಲ್ ಮತ್ತು ಅರ್ಜೆಂಟೀನಾ ದೇಶಗಳ ಗಡಿಯಲ್ಲಿ ವಿಶ್ವದಾಖಲೆಯ ಮತ್ತೊಂದು ಜಲಪಾತ ಇದೆ. 'ಇಗುವಾಜು' ನದಿಯ, ಅದೇ ಹೆಸರಿನ ಈ ಜಲಪಾತ (ಭೂಪಟದಲ್ಲಿ ಬಾಣ 5) 2.7 ಕಿ.ಮೀ ಅಗಲ ಇದೆ! ಇಲ್ಲಿ ಭಿನ್ನ ಭಿನ್ನ ಅಗಲಗಳ ಒಟ್ಟು 275 ಪ್ರತ್ಯೇಕ ಧಾರೆಗಳು ಧುಮುಕುತ್ತಿವೆ!

■ ಎನ್. ವಾಸುದೇವ್